ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೯**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

**ಸೋಮವಾರ, ದಿನಾಂಕ: ೧೮ನೇ ಮಾರ್ಚ್, ೨೦೨೫**

---

**ಸಮೂಹ – I**

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೨. ಇಂಧನ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

೫. ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

## ೧೯೯೫ ರಿಂದ ೨೦೦೫ರ ಅವಧಿಯಲ್ಲಿ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) –**

೧೨೧ (೧೦೭೧) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೯೯೫ ರಿಂದ ೨೦೦೫ರ ಅವಧಿಯಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಅನುದಾನರಹಿತ ಕನ್ನಡ ಮಾಧ್ಯಮದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಾಲಾ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿಭಾಸದೊಡನೆ ವಿವರ ನೀಡುವುದು)

(ಆ) ಸದರಿ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಬೋಧಕ ಬೋಧಕೇತರರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸದರಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಬೇಕಾಗುವ ವೆಚ್ಚವೆಷ್ಟು ; (ವಿವರ ನೀಡುವುದು)

(ಈ) ಪ್ರಸ್ತುತ ಸಾಲಿನ ಬಜೆಟ್‌ನಲ್ಲಿ ಈ ಕನ್ನಡ ಶಾಲೆಗಳನ್ನು ವೇತನಾನುದಾನ ಕ್ಕೊಳಪಡಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಸರ್ಕಾರಿ ಅನುದಾನಿತ ಡಿಪ್ಲೊಮಾ ಕಾಲೇಜುಗಳಲ್ಲಿ ಮಂಜೂರಾದ ಹುದ್ದೆಗಳ ಬಗ್ಗೆ

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) –**

೧೨೨ (೧೦೭೦) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಮತ್ತು ಅನುದಾನಿತ ಡಿಪ್ಲೊಮಾ ಕಾಲೇಜುಗಳಲ್ಲಿ ಮಂಜೂರಾದ ಸಹಾಯಕ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಮಂಜೂರಾದ ಹುದ್ದೆಗಳಲ್ಲಿ ದಿನಾಂಕ: ૩೧–೦೧–೨೦೨೫ಕ್ಕೆ ಅನುದಾನಕ್ಕೊಳಪಟ್ಟ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ; ಕ್ರಮಕೈಗೊಳ್ಳದಿದ್ದಲ್ಲಿ ಕಾರಣಗಳೇನು ;

(ಈ) ಖಾಲಿ ಇರುವ ಹುದ್ದೆಗಳಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಸೌರಶಕ್ತಿ ಮತ್ತು ಪವನ ಶಕ್ತಿ ಘಟಕಗಳ ಸ್ಥಾಪನೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೩ (೧೦೫೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳು ಅತೀ ಹೆಚ್ಚು ಬಿಸಿಲಿನ ತಾಪಮಾನವನ್ನು ಹೊಂದಿದ್ದು ಹಾಗೂ ಬಂಯಲು ಸೀಮೆಯಾಗಿರುವುದರಿಂದ ಗಾಳಿಯು ನಿರಂತರವಾಗಿ ಬೀಸುವುದರಿಂದ ಇಲ್ಲಿ ಸೌರ ಶಕ್ತಿ ಮತ್ತು ಪವನ ಶಕ್ತಿ ಉತ್ಪಾದನೆಗೆ ಅವಕಾಶಗಳು ಹೇರಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಜಿಲ್ಲೆಗಳಲ್ಲಿ ಸೌರ ಶಕ್ತಿ ಮತ್ತು ಪವನ ಶಕ್ತಿ ಉತ್ಪಾದನಾ ಘಟಕಗಳನ್ನು ಆರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ?

## ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರೆಂದು ಪರಿಗಣಿಸಿ ಮುಖ್ಯ ಶಿಕ್ಷಕರಾಗಿ ಮುಂಬಡ್ತಿ ನೀಡುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೧೨೪ (೧೧೩೭) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರೊ. ಎಲ್.ಆರ್. ವೈದ್ಯನಾಥನ್ ವರದಿಯನ್ನು ಸರ್ಕಾರ ಒಪ್ಪಿ ಕ್ಯಾಬಿನೆಟ್ ಅನುಮೋದನೆ ನೀಡಿ ಗೆಜೆಟ್‌ನಲ್ಲಿ ಪ್ರಕಟಿಸಿದ್ದರೂ ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರೆಂದು ಪರಿಗಣಿಸಿ ಮುಖ್ಯ ಶಿಕ್ಷಕರಾಗಿ ನೀಡುವ ಪ್ರಕ್ರಿಯೆ ಸುಮಾರು ೧೭ ವರ್ಷಗಳಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ದೈಹಿಕ ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರು (ದೈಹಿಕ ಶಿಕ್ಷಣ) ಎಂದು ಇಲಾಖೆ ಪರಿಗಣಿಸಿದರೂ, ಇಲ್ಲಿಯ ತನಕ ಮುಖ್ಯ ಶಿಕ್ಷಕರಾಗಿ ಮುಂಬಡ್ತಿ ನೀಡುವ ಅನುಷ್ಠಾನ ಆದೇಶ ಮಾಡದೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ದೈಹಿಕ ಶಿಕ್ಷಣ ಶಿಕ್ಷಕರನ್ನು ಮುಖ್ಯ ಶಿಕ್ಷಕರಾಗಿ ಮುಂಬಡ್ತಿ ನೀಡುವಂತೆ ಅನುಷ್ಠಾನ ಆದೇಶವನ್ನು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ

ಸರ್ಕಾರದಿಂದ ಪತ್ರದ ಮೂಲಕ ಇಲಾಖೆಗೆ ಸುಮಾರು ೩ ಬಾರಿ ನಿರ್ದೇಶನ ನೀಡಿದರೂ ಅನುಷ್ಠಾನಗೊಳಿಸದೆ ವಿಳಂಬ ಧೋರಣೆ ಮಾಡುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಇಲ್ಲಿಯ ತನಕ ನಡೆದ ಸಭೆಗಳು, ಸಭಾ ನಡಾವಳಿಗಳು ಮತ್ತು ಸೂಕ್ತ ಆದೇಶದೊಂದಿಗೆ ಪೂರ್ಣ ಮಾಹಿತಿ ನೀಡುವುದು ಹಾಗೂ ಯಾವ ಕಾಲಾವಧಿಯಲ್ಲಿ ಅನುಷ್ಠಾನ ಆದೇಶ ಮಾಡಲಾಗುವುದು ?

## ವಿಶ್ವವಿದ್ಯಾಲಯಗಳಲ್ಲಿ ನಿವೃತ್ತಿ, ರಾಜೀನಾಮೆಗಳು ಇತ್ಯಾದಿಗಳಿಂದ ತೆರವಾದ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ತುಂಬುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೨೫ (೧೯೮) ಉನ್ನತ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು, ಮೈಸೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳಲ್ಲಿ ನಿವೃತ್ತಿ ಹಾಗೂ ನಿಧನ ಹಾಗೂ ಇತ್ಯಾದಿ ಕಾರಣಗಳಿಂದ ತೆರವಾಗಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳೆಷ್ಟು ; (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)

(ಆ) ನಿವೃತ್ತಿ ಹಾಗೂ ಇತ್ಯಾದಿ ಕಾರಣಗಳಿಂದ ತೆರವಾಗಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ತುಂಬಿಕೊಳ್ಳುವ ಕುರಿತು ಸರ್ಕಾರ ಏನು ಚಿಂತನೆ ನಡೆಸಿದೆ ; (ಮಾಹಿತಿ ನೀಡುವುದು)

(ಇ) ವಿಶ್ವವಿದ್ಯಾಲಯದಿಂದ ನಿವೃತ್ತಿಯಾದ ನೌಕರರಿಗೆ ಪಿಂಚಣಿ ನೀಡಲು ವಿಶ್ವವಿದ್ಯಾಲಯಗಳಿಗೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂಬ ಆರೋಪ ಇರುವುದು ನಿಜವೇ ; ಹಾಗಿದ್ದಲ್ಲಿ, ಅದನ್ನು ಸರಿಪಡಿಸುವ ಕ್ರಮ ಕೈಗೊಳ್ಳಲಾಗುವುದೇ ? (ಮಾಹಿತಿ ನೀಡುವುದು)

## ರಾಜ್ಯದಲ್ಲಿನ ಯುವನಿಧಿ ಯೋಜನೆ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೬ (೧೦೮೩) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಯುವನಿಧಿ ಕಾರ್ಯಕ್ರಮದಡಿ ಈವರೆಗೆ ಎಷ್ಟು ಮಂದಿ ನಿರುದ್ಯೋಗ ಭತ್ಯೆಗಾಗಿ ನೋಂದಣಿ ಮಾಡಿಕೊಂಡಿದ್ದಾರೆ ; (ಹೆಸರು ಹಾಗೂ ವಿಳಾಸವಾರು ಮಾಹಿತಿ ನೀಡುವುದು)

(ಆ) ಯುವನಿಧಿ ಯೋಜನೆಗಾಗಿ ಎಷ್ಟು ಮಂದಿಗೆ ಈವರೆಗೆ ನಿರುದ್ಯೋಗ ಭತ್ಯೆ ನೀಡಲಾಗಿದೆ ; (ಹೆಸರು ಹಾಗೂ ವಿಳಾಸದ ಮಾಹಿತಿ ನೀಡುವುದು)

(ಇ) ಇನ್ನೂ ಎಷ್ಟು ಅರ್ಜಿಗಳು ನಿರುದ್ಯೋಗ ಭತ್ಯೆಗಾಗಿ ಸರ್ಕಾರದ ಮುಂದೆ ಬಾಕಿ ಇವೆ ; (ಹೆಸರು ಹಾಗೂ ವಿಳಾಸವಾರು ಮಾಹಿತಿ ನೀಡುವುದು)

(ಈ) ಕೌಶಲ್ಯಾಭಿವೃದ್ಧಿ ಇಲಾಖೆಯಡಿ ೨೦೨೪–೨೫ನೇ ಹಣಕಾಸು ವರ್ಷದಲ್ಲಿ ಎಷ್ಟು ಮಂದಿಗೆ ಕೌಶಲ್ಯ ತರಬೇತಿ ನೀಡಲಾಗಿದೆ ? (ವಿವರ ನೀಡುವುದು)

## ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿನ ಅಧಿಕಾರಿಗಳ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೭ (೧೦೮೫) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಹಾರ ಸುರಕ್ಷತಾ ಪ್ರಾಧಿಕಾರವನ್ನು ಯಾವಾಗ ಪ್ರಾರಂಭಿಸಲಾಯಿತು ಅದರಲ್ಲಿ ಮಂಜೂರಾದ ಹುದ್ದೆಗಳೆಷ್ಟು ; ಎರವಲು ಸೇವೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; ಹಾಗೂ ಸದರಿಯವರು ಎಷ್ಟು ವರ್ಷಗಳಿಂದ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; (ಅಧಿಕಾರಿವಾರು ಮಾಹಿತಿ ನೀಡುವುದು)

(ಆ) ಜಿಲ್ಲಾಮಟ್ಟದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; (ಅವರ ವಿದ್ಯಾರ್ಹತೆ ವಿವರ ನೀಡುವುದು)

(ಇ) ಕೆಲ ಅಧಿಕಾರಿಗಳು ನಕಲಿ ಅಂಕಪಟ್ಟಿ ಸಲ್ಲಿಸಿರುವ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರ ಮೇಲೆ ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಆಹಾರ ಸುರಕ್ಷತಾ ಪ್ರಾಧಿಕಾರದಲ್ಲಿ ಆರೋಗ್ಯ ಸುರಕ್ಷತಾ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ, ವೈದ್ಯರು ಮತ್ತು ಕಿರಿಯ ಅಧಿಕಾರಿಗಳ ವಿವರ ನೀಡುವುದು ಹಾಗೂ ಸದರಿಯವರು ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ? (ಸಂಪೂರ್ಣ ಮಾಹಿತಿ ನೀಡುವುದು)

## ಖಾಸಗಿ ಕನ್ನಡ ಶಾಲೆಗಳಿಗೆ ನಿಯಮಿತ ಅನುದಾನ ನೀಡುವ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೮ (೧೧೧೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

(ಅ) ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಖಾಸಗಿ ಕನ್ನಡ ಶಾಲೆಗಳ ಪಾತ್ರ ಬಹುಮುಖ್ಯವಾದದ್ದು, ಆದರೆ ಖಾಸಗಿ ಕನ್ನಡ ಶಾಲೆಗಳು ಆರ್ಥಿಕವಾಗಿ ಸಂಕಷ್ಟದಲ್ಲಿದ್ದು, ಬಹಳಷ್ಟು ಶಾಲೆಗಳು ಮುಚ್ಚುವ ಹಂತದಲ್ಲಿದ್ದು, ಸದರಿಯವರಿಗೆ ಸರ್ಕಾರದ ಬೆಂಬಲ ಅವಶ್ಯವಿರುವುದರಿಂದ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

## ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳ ಜಾಗ/ಆಸ್ತಿಯ ಸಮಸ್ಯೆ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೨೯ (೧೦೬೯) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳ ಜಾಗದ/ಆಸ್ತಿಯ ಸಮಸ್ಯೆ ಇದ್ದು, ಅವು ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಈ ರೀತಿ ಜಾಗದ/ಆಸ್ತಿಯ ಸಮಸ್ಯೆಯಿರುವ ಎಷ್ಟು ಸರ್ಕಾರಿ ಶಾಲೆಗಳಿವೆ ;

(ಇ) ಬೆಳಗಾವಿ ನಗರದಲ್ಲಿಯೇ ೧೨೦ ಸರ್ಕಾರಿ ಶಾಲೆಗಳಲ್ಲಿ ಸುಮಾರು ೬೫ ಸರ್ಕಾರಿ ಶಾಲೆಗಳ ಜಾಗ ಸರ್ಕಾರದ ಹೆಸರಿನಲ್ಲಿರದೆ ಮಹಾನಗರ ಪಾಲಿಕೆ ಹೆಸರಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಶಾಲೆಗಳ ಆಸ್ತಿ ಸರ್ಕಾರದ ಹೆಸರಿನಲ್ಲಿರದ ಕಾರಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ನೀಡಲು ತೊಡಕಾಗಿದೆ ; ಇದನ್ನು ತಕ್ಷಣ ಪರಿಹರಿಸಲಾಗುವುದೆ ;

(ಉ) ಜಿಲ್ಲಾ ಮಟ್ಟದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸರ್ಕಾರಿ ಶಾಲೆಗಳ ಜಾಗ/ಆಸ್ತಿಯನ್ನು ಸರ್ಕಾರದ ಹೆಸರಿಗೆ ವರ್ಗಾವಣೆಯಾಗದಿರುವುದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಹೊಸಕೋಟೆ ತಾಲ್ಲೂಕಿನಲ್ಲಿ ಬಿ.ಪಿ.ಎಲ್. (BPL) ಕಾರ್ಡ್‍ಗಳ ಕುರಿತು

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೦ (೧೧೪೩) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಬಿಪಿಎಲ್ ಕಾರ್ಡ್‍ಗಳನ್ನು ರದ್ದುಪಡಿಸಲಾಗಿದೆ ; (ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಯಾವ ಮಾನದಂಡಗಳಿಂದ ಬಿಪಿಎಲ್ ಪಡಿತರ ಚೀಟಿ ರದ್ದುಪಡಿಸಲಾಗಿದೆ ; (ವಿವರ ನೀಡುವುದು)

(ಇ) ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ೨ ವರ್ಷಗಳಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದ ಕುಟುಂಬಗಳು ಎಷ್ಟು ; (ಗ್ರಾಮವಾರು ವಿವರಗಳನ್ನು ನೀಡುವುದು)

(ಈ) ಕೆಲವು ಪ್ರಕರಣಗಳಲ್ಲಿ ಒಂದು ಕುಟುಂಬದ ಸದಸ್ಯರು ಬೇರೆ ಬೇರೆ ಮನೆ ಮಾಡಿ ವಾಸಿಸುತ್ತಿದ್ದು, ಇವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿದ್ದರೂ ಅವರ ಪೋಷಕರು ಅಥವಾ ಮೂಲ ಮನೆಯಲ್ಲಿ ಹೆಚ್ಚಿನ ಆದಾಯವಿದೆಯೆಂದು ಆ ಬಡ ಕುಟುಂಬದ ಬಿಪಿಎಲ್ ಪಡಿತರ ಚೀಟಿಯನ್ನು ರದ್ದುಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ರದ್ದುಪಡಿಸಿದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು ? (ವಿವರಗಳನ್ನು ನೀಡುವುದು)

## ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಆನೆ ಹಾವಳಿಯಿಂದ ಉಂಟಾಗಿರುವ ನಷ್ಟದ ಬಗ್ಗೆ

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೧ (೧೮೯೬) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೦೫ ವರ್ಷಗಳಲ್ಲಿ ಆನೆ ದಾಳಿಯಿಂದ ನಾಶಗೊಂಡಿರುವ ರೈತರ ಬೆಳೆಗಳು ಮತ್ತು ಉಂಟಾಗಿರುವ ಆರ್ಥಿಕ ನಷ್ಟಗಳು ಹಾಗೂ ಸಾವನ್ನಪ್ಪಿರುವ ರೈತ ಕುಟುಂಬಗಳು ಎಷ್ಟು; ಅದಕ್ಕಾಗಿ ವಿನಿಯೋಗಿಸಿರುವ ಪರಿಹಾರದ ಮೊತ್ತ ಎಷ್ಟು ; (ಜಿಲ್ಲಾವಾರು, ಪ್ರಕರಣವಾರು ಅಂಕಿ ಅಂಶದೊಂದಿಗೆ ಪೂರ್ಣ ವಿವರ ನೀಡುವುದು)

(ಆ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ೦೫ ವರ್ಷಗಳಲ್ಲಿ ಆನೆ ದಾಳಿಯಿಂದ ನಷ್ಟ ಉಂಟಾಗಿರುವ ಸಾರ್ವಜನಿಕರ ಆಸ್ತಿ–ಪಾಸ್ತಿಗಳೆಷ್ಟು ; ಸಾವನ್ನಪ್ಪಿರುವ ಪ್ರಕರಣ ಎಷ್ಟು ; ಅದಕ್ಕಾಗಿ ವಿನಿಯೋಗಿಸಿರುವ ಪರಿಹಾರದ ಮೊತ್ತ ಎಷ್ಟು; (ತಾಲ್ಲೂಕುವಾರು, ಪ್ರಕರಣವಾರು ಪೂರ್ಣ ವಿವರ ನೀಡುವುದು)

(ಇ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಗೆ ಕಳೆದ ೦೫ ವರ್ಷಗಳಲ್ಲಿ ಆನೆ ದಾಳಿ ತಡೆಗಟ್ಟಲು ಸರ್ಕಾರದಿಂದ ಬಿಡುಗಡೆಗೊಂಡಿರುವ ಅನುದಾನ ಎಷ್ಟು ; ಈ ಅನುದಾನದಿಂದ ತೆಗೆದುಕೊಂಡ ಕ್ರಮವೇನು ; ಯಾವ ಯಾವ ರೀತಿಯಲ್ಲಿ ಆನೆ ದಾಳಿ ತಡೆಗಟ್ಟಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆ ; ಅನುದಾನ ದುರ್ಬಳಕೆಯಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಈ) ಸರ್ಕಾರದ ಅನುದಾನದಿಂದ ಸಮರ್ಪಕವಾಗಿ ಆನೆ ದಾಳಿ ತಡೆಗಟ್ಟುವಿಕೆಯಲ್ಲಿ ಹಾಸನ ಅರಣ್ಯ ಇಲಾಖೆಯ ಅಧಿಕಾರಿಗಳು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು ; ಸಾರ್ವಜನಿಕರ ಹಿತಾಸಕ್ತಿಯಿಂದ ಸರ್ಕಾರ ಇನ್ನಾದರೂ ಹೆಚ್ಚು ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳನ್ನು ನೇಮಕ ಮಾಡುವಲ್ಲಿ ಕ್ರಮವಹಿಸುವುದೇ ? (ಸಂಪೂರ್ಣ ವಿವರ ನೀಡುವುದು)

## ನಿಮ್ಹಾನ್ಸ್ ಶಾಖೆಯನ್ನು ಕಲಬುರಗಿ ಜಿಲ್ಲೆಯಲ್ಲಿ ಪ್ರಾರಂಭಿಸುವ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೨ (೧೦೪೩) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿಯಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಶಾಖೆ ಪ್ರಾರಂಭಿಸಲು ಹಿಂದುಳಿದ ಜಿಲ್ಲೆಗಳಿಂದ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ನಿಮ್ಹಾನ್ಸ್ ಶಾಖೆ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಮುಂಬರುವ ಆಯವ್ಯಯದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಅವಶ್ಯವಿರುವ ಅನುದಾನವನ್ನು ಸರ್ಕಾರ ಮೀಸಲಿಡುವುದೇ ?

# ರಾಜ್ಯ ಅನುದಾನಿತ ಐಟಿಐ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯನ್ವಯ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೧೩೩ (೧೨೫೫) ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಅನುದಾನಿತ ಐಟಿಐ ತರಬೇತಿ ಕೇಂದ್ರಗಳ ನೌಕರರಿಗೆ ಶ್ರೀ ಥಾಮಸ್ ನೇತೃತ್ವದ ವರದಿಯನ್ನು ಯಾವಾಗ ಜಾರಿ ಮಾಡಲಾಗಿದೆ ; (ವಿವರ ಮತ್ತು ಆದೇಶ ನೀಡುವುದು)

(ಆ) ಸದರಿಯವರಿಗೆ ಥಾಮಸ್ ನೇತೃತ್ವದ ವರದಿಯಂತೆ ಇದುವರೆಗೆ ಇತರೆ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಿರುವ ಎಲ್ಲಾ ಸೌಲಭ್ಯಗಳನ್ನು ನೀಡದಿರಲು ಕಾರಣಗಳೇನು ; (ವಿವರ ನೀಡುವುದು)

(ಇ) ಸದರಿ ನೌಕರರಿಗೆ ಥಾಮಸ್ ವರದಿಯ ಶಿಫಾರಸ್ಸಿನಂತೆ ಸೇವಾ ನಿಯಮಗಳನ್ನು ರೂಪಿಸದೆ ಇರುವುದರಿಂದ ಸಾವಿರಾರು ನೌಕರರು ಯಾವುದೇ ಸೌಲಭ್ಯಗಳಿಲ್ಲದೆ ವಂಚಿತರಾಗಿದ್ದು, ಯಾವ ಕಾಲಮಿತಿಯಲ್ಲಿ ಸೇವಾ ನಿಯಮಗಳನ್ನು ರಚಿಸಿ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತದೆ ;

(ಈ) ೨೦೦೬ರ ನಂತರ ಅನುದಾನಕ್ಕೊಳಪಡಿಸಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೇತರರಿಗೆ ಶಿಕ್ಷಣ ಇಲಾಖೆಯಲ್ಲಿ ನೀಡುತ್ತಿರುವಂತೆ ನಿವೃತ್ತಿ ನಂತರ ರಜೆ ನಗದೀಕರಣ ಸೌಲಭ್ಯವನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; ಹಾಗೂ ಯಾವ ಕಾಲಮಿತಿಯಲ್ಲಿ ಸದರಿಯವರಿಗೆ ನಿವೃತ್ತಿ ನಂತರ ರಜೆ ನಗದೀಕರಣವನ್ನು ನೀಡಲಾಗುತ್ತದೆ ?

# ನಕಲಿ ಔಷಧ ಪೂರೈಕೆ ಮತ್ತು ಮಾರಾಟವನ್ನು ತಡೆಗಟ್ಟುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೪ (೧೦೫೪) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಔಷಧ ಮಾರುಕಟ್ಟೆಯಲ್ಲಿ ನಕಲಿ ಔಷಧಗಳ ಪೂರೈಕೆ ಮತ್ತು ಮಾರಾಟಜಾಲ ವ್ಯಾಪಕವಾಗಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಳೆದ ೦೩ ವರ್ಷಗಳಲ್ಲಿ ಗುರುತಿಸಲಾದ ನಕಲಿ ಔಷಧ ತಯಾರಿಕಾ ಕಂಪನಿಗಳನ್ನು ಪತ್ತೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಇಂತಹ ನಕಲಿ ಔಷಧ ತಯಾರಿಕಾ ಕಂಪನಿಗಳು ಯಾವುವು ; (ವಿವರ ನೀಡುವುದು)

(ಆ) ಇಂತಹ ನಕಲಿ ಔಷಧ ತಯಾರಿಕಾ ಕಂಪನಿ/ಔಷಧ ಪೂರೈಕೆದಾರರು ಮತ್ತು ಮಾರಾಟಗಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಶುಶ್ರೂಷಾಧಿಕಾರಿಗಳ ಬಗ್ಗೆ

**ಡಾ: ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೫ (೧೦೮೯) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ ಶುಶ್ರೂಷಾಧಿಕಾರಿಗಳ ಬೇಡಿಕೆಯ ಮನವಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು ೫೦೦೦ ಗುತ್ತಿಗೆ ಶುಶ್ರೂಷಾಧಿಕಾರಿಗಳನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಇವರಲ್ಲಿ ಈಗಾಗಲೇ ಸುಮಾರು ೧೫ ರಿಂದ ೨೦ ವರ್ಷಕ್ಕೆ ಸೇವೆ ಸಲ್ಲಿಸಿ ನಿವೃತ್ತಿಯಾಗಲಿರುವ ಗುತ್ತಿಗೆ ಶುಶ್ರೂಷಾಧಿಕಾರಿಗಳಿಗೆ ಸರ್ಕಾರದ ವತಿಯಿಂದ ನೀಡುವ ಆರ್ಥಿಕ ಸೌಲಭ್ಯಗಳೇನು ;

(ಈ) ಈಗಾಗಲೇ ಸುಮಾರು ೧೫ ರಿಂದ ೨೦ ವರ್ಷಗಳಿಂದ ಗುತ್ತಿಗೆ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಶುಶ್ರೂಷಾಧಿಕಾರಿಗಳ ನೇರ ನೇಮಕಾತಿಯಲ್ಲಿ ಕೃಪಾಂಕ ವಯೋಮಿತಿ ಸಡಿಲಿಕೆ ಅಂತಹ ವಿಶೇಷ ಸೌಲಭ್ಯ ನೀಡುವುದಕ್ಕೆ ಸರ್ಕಾರದ ನಿಲುವು ಏನು?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – ಪ್ರತಿಗಳು

**List of Questions for Oral Answers**

**Total No. of Questions - 15**

# LIST - 9

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Monday, the 17th March, 2025

---

### GROUP - I

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for Primary and Secondary Education
7. Minister for Higher Education

---

### BRINGING KANNADA MEDIUM SCHOOLS UNDER GRANT-IN-AID

**Sri Puttanna (Teachers' Constituency)**

121 (1071) Will the Minister for Primary and Secondary Education be pleased to state :-

a) the number of unaided Kannada medium secondary schools and pre-university colleges which are running

continuously commenced during the period from 1995 to 2005 in the State ; (districtwise details along with address be furnished)

(b) the number of eligible teaching and non teaching staff who are working in the said schools and colleges ; (talukwise details be furnished)

(c) the required expenditure for bringing said schools and colleges under grant-in-aid ; (details be furnished)

(d) whether the step would be taken for bringing Kannada medium schools under grant-in-aid in the budget of current year?

**SANCTIONED POSTS IN THE GOVERNMENT AND AIDED DIPLOMA COLLEGES**

**Sri Adagur H. Vishwanath (Nominated)**

122(1070) Will the Minister for Higher Education be pleased to state :-

(a) the number of Assistant Professors and Professors posts that have been sanctioned in the Government and aided diploma colleges ;

(b) out of the sanctioned posts, the number of posts which are lying vacant after subjected to grant-in-aid as on 31.01.2025 ;

(c) the steps taken by the Government to fill up the vacant posts; if not, the reasons for the same ;

(d) whether it has come to the notice of the Government that the hardship is being caused to the education of students due to the posts are lying vacant ; the step taken by the Government to fill up the vacant posts ?

**INSTALLATION OF SOLAR AND WIND POWER UNITS**

**Sri Basanagouda Badarli (Elected by Legislative Assembly)**

123 (1052) Will the Minister for Energy be pleased to state :-

(a) whether it has come to the notice of the Government that there are abundant opportunities for generating solar and wind power due to highest temperature and wind is blowing continuously in Raichur and Kalaburagi districts since these districts are lying in bayaluseeme region ;

(b) if so, the steps taken by the Government to commence the solar and wind power generating units in these districts ?

## PROVIDING PROMOTION FOR PHYSICAL EDUCATION TEACHERS

**Sri Ramojigowda (Graduates' Constituency)**

124(1135) Will the Minister for Primary and Secondary Education be pleased to state :-

(a) whether it has come to the notice of the Government that the process of providing the promotion for Physical Education Teachers into the Head Masters by considering as Assistant Teachers is being delayed from approximately 17 years eventhough Prof.L.R.Vaidyanathan report has been accepted by the Government and the same has been published in the gazette by providing cabinet approval ;

(b) whether it has come to the notice of the Government that the process of providing promotion into the Head Masters is being delayed due to non-issuance of implementation order till date eventhough the Physical Education Teachers are considered as Assistant Teachers (physical education) by the Department ;

(c) the step taken by the Government regarding the delay tactics being carriedout without implementing the same eventhough approximately 3 times direction have been issued by the Government to the

Department through the letter to take up necessary step as per the implementation order for providing the promotion for Physical Education Teachers into the Head Masters ;

(d) the complete information of meetings and the proceeding of meetings which have been held till date with regard to the said process along with an appropriate order be furnished and the timelimit within which the implementation order would be issued ?

## TEACHING AND NON-TEACHING POSTS IN THE UNIVERSITIES

**Sri S.V. Sankanur (Graduates' Constituency)**

125 (1098) Will the Minister for Higher Education be pleased to state :-

(a) the number of teaching and non-teaching posts which are lying vacant due to retirement, death and other reasons in the Karnataka University, Bengaluru, Mysuru and Gulbarga Universities from the various Universities of the State ; (Universitywise information be furnished)

(b) the contemplation of the Government with regard to fill up the teaching and non-teaching posts which are lying vacant due to retirement and other reasons ; (information be furnished)

(c) whether it is true that there is a allegation that the complete grant has not been released for the universities to provide the pension for employees who have been retired from the University ; if so, the step that would be taken to rectify the same ? (information be furnished)

## YUVA NIDHI SCHEME IN THE STATE

**Sri D.S. Arun (Local Authorities Constituency)**

126 (1083) Will the Minister for Medical Education and Skill Development be pleased to state :-

(a) the number of candidates who have been registered for unemployment allowance under Yuva Nidhi Scheme in the State so far ; (name and addresswise information be furnished)

(b) the number of persons to whom unemployment allowance has been provided in the Yuva Nidhi Scheme so far ; (name and addresswise information be furnished)

(c) the number of applications which are remains pending before the Government for unemployment allowance ; (name and addresswise information be furnished)

(d) the number of persons to whom the Skill Development Training has been provided under the Skill Development Department during the financial year 2024-25 ? (details be furnished)

## OFFICERS IN FOOD SAFETY AUTHORITY

**Sri Sharavana T.A. (Elected by Legislative Assembly)**

127 (1085) Will the Minister for Health and Family Welfare be pleased to state :-

(a) the date on which the Food Safety Authority has been commenced ; the number of posts that have been sanctioned thereof ; the number of Officers who are working on deputation ; and the number of years from which the said Officers are working in the authority ; (officerswise information be furnished)

(b) the number of Officers who are working as Food Safety Officers in the district level ; (details of their qualification be furnished)

(c) whether it has come to the notice of the Government that there is an allegation that some Officers have submitted fake marks cards ; if so, the actions taken against them ; (complete information be furnished)

(d) the details of Specialist and Junior Officers who are working in the post of health safety in the Food Safety Authority be furnished and the number of years from which they are working ? (complete information be furnished)

**PROVIDING REGULAR GRANT TO PRIVATE KANNADA MEDIUM SCHOOLS**

**Dr. Yathindra S (Elected by Legislative Assembly)**

128 (1114) Will the Minister for Primary and Secondary Education be pleased to state :-

(a) the role of private Kannada medium schools for preserving and developing the Kannada language is very important, but private kannada medium schools are in financial crisis and many schools are at the verge of closure condition and there is a necessity of the support from the Government for the said schools, the measures taken by the Government in this regard ? (details be furnished)

**ISSUE OF LAND/PROPERTY OF GOVERNMENT PRIMARY/SECONDARY SCHOOLS**

**Dr. Talwar Sabanna (Nominated)**

129 (1069) Will the Minister for Primary and Secondary Education be pleased to state :-

(a) there is a land/property issue of the Government primary/secondary schools of the State, whether it has come to the notice of the Government that these are in unhardened State ;

(b) the number of Government schools in the State which have land/ property issue in this manner ;

(c) whether it has come to the notice of the Government that in the Belagavi city, out of 125 Government Schools lands of about 65 Government schools are in the name of Municipal Corporation instead of the name of the Government ;

(d) there is a impediment to provide the Legislator's Local Area Development Fund for the development of basic facilities since the property of the schools are not in the name of the Government ; whether it would be solved immediately ;

(e) the steps that would be taken regarding non transfer of land/property of the Government schools to the name of the Government due to the negligence by the Officers of the Department of School Education in the district level ?

## BPL CARDS OF HOSKOTE TALUK

**Sri N. Nagaraju (M.T.B.) (Elected by Legislative Assembly)**

130 (1143) Will the Minister for Food and Civil Supplies and Consumer Affairs be pleased to state :-

(a) the number of B.P.L cards that have been cancelled in the limits of Hoskote Assembly Constituency of Bengaluru Rural District ; (information be furnished)

(b) if so, the criterias for cancellation of B.P.L ration cards ; (details be furnished)

(c) the number of families who have B.P.L ration cards in the limits of Hoskote Assembly Constituency during the last 2 years ; (villagewise details be furnished)

(d) in some cases, the members of a family are living in different houses, whether it has come to the notice of the Government that the B.P.L ration card of that

poor family is being cancelled as their parents and original household are having more income eventhough they are eligible for getting B.P.L ration card ;

(e) if so, the number of ration cards that have been cancelled ? (details be furnished)

**REGARDING ELEPHANT ATTACK**

**Sri Suraj Revanna (Local Authorities Constituency)**

131 (1096) Will the Minister for Forest, Ecology and Environment be pleased to state :-

(a) the quantum of crops that have been damaged and the financial loss that have been occurred and the number of farmers families which have deceased due to elephant attack during the last 5 years in the State ; the amount of compensation that have been utilized for the same ; (districtwise and casewise complete details alongwith statistics be furnished)

(b) the number of public properties for which the loss have been occurred due to elephant attack during the last 5 years in the limit of Hassan district ; the number of deceased cases; the amount of compensation that have been utilized for the same ; (talukwise and casewise complete details be furnished)

(c) the grant that have been released by the Government to the Forest Department to prevent the elephant attack during the last 5 years in the limits of Hassan district ; the step that have been taken from the said grant ; the step that have been taken by the Department to prevent the elephant attack ; whether the amount has been misused ; (complete details be furnished)

(d) whether it has come to the notice of the Government that the Officers of the Forest Department of Hassan have failed to prevent the elephant attack properly

by utilizing the grant of the Government ; if so, the action that have been taken in this regard; whether the step would be taken by the Government to recruit the Officers who are working with concern in future with the interest of public ? (complete details be furnished)

**COMMENCEMENT OF NIMHANS BRANCH IN KALABURAGI DISTRICT**

**Sri Thippanappa Kamaknoor (Elected by Legislative Assembly)**

132 (1043) Will the Minister for Health and Family Welfare be pleased to state :-

(a) whether it has come to the notice of the Government that there is a demand from the backward districts to commence the National Institute of Mental Health and Neurosciences (NIMHANS) branch in Kalaburagi ;

(b) if so, the steps taken by the Government to commence the same ;

(c) whether the required grant would be earmarked by the Government in the upcoming budget to construct the hospital ?

**PROVIDING FACILITIES TO EMPLOYEES OF AIDED ITI'S**

**Sri Shashil G. Namoshi (Teachers' Constituency)**

133(1255) Will the Minister for Medical Education and Skill Development be pleased to state:-

(a) the date on which the report under the Chairmanship of Sri.Thomas have been implemented for the employees of Aided Industrial Training Institutes of the State ; (details and orders be furnished)

(b) the reasons for not providing all facilities for the said employees which have been provided to other aided educational institutions till date as per the report under the Chairmanship of Sri.Thomas ; (details be furnished)

(c) thousands of employees have deprived without any facility due to the service rules have not been framed for the said employees as per the recommendation of Thomas report, the timelimit within which all facilities would be provided by framing the service rules ;

(d) whether it has come to the notice of the Government that the leave encashment facility has not been provided after retirement for the teaching and non-teaching staff who are working after bringing under grant in-aid from 2006 on par with the same is being provided in the education department; if so, the steps taken in this regard ; and the timelimit within which the leave encashment facility would be provided for the said employees after retirement ?

## PREVENTION OF SUPPLY AND SALE OF COUNTERFEIT MEDICINES

**Sri S. Ravi (Local Authorities Constituency)**

134 (1054) Will the Minister for Health and Family Welfare

be pleased to state:-

(a) whether it has come to notice of the Government that the network of supply and sale of counterfeit medicines in the pharmaceutical market of the State is being increased extensively; if so, whether the companies that are manufacturing counterfeit medicines have been traced out during the last 3 years; if so, the particulars of companies which are manufacturing such counterfeit medicines; (details be furnished)

(b) the actions taken by the Government against such counterfeit medicines manufacturing company/ suppliers and sellers? (complete details be furnised)

## NURSING OFFICERS WORKING IN GOVERNMENT HOSPITALS OF THE STATE

**Dr. D.Thimmaiah (Local Authorities Constituency)**

135 (1089) Will the Minister for Health and Family Welfare be pleased to state:-

(a) whether it has come to the notice of the Government that there is a requisition for the demand of Contractual Nursing Officers who are working in the Government hospitals of the State ;

(b) the measures taken by the Government to regularize about 5000 Contractual Nursing Officers who are working in the State ;

(c) the financial facilities will be provided by the Government for Contractual Nursing Officers who would be retiring by serving for about 15 to 20 years of service already ;

(d) the stand of the Government to provide the special facility like weightage and age relaxation in the direct recruitment of Nursing Officers who are working as contractual employees about 15 to 20 years already ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-901-Bengaluru, P2